**ಓ.ಎಸ್. – 221/2013**

**ಡಿ.ಡಬ್ಲ್ಯೂ.– 2**

**ಸಾಕ್ಷಿಯನ್ನು ದಿಃ 03.07.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಟಿ.ಆರ್ ವಕೀಲರಿಂದ**

1. ನಿಡಿ–5 ರ ಕ್ರಯಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ಗೊತ್ತು. ನಿಡಿ–5 ಕ್ರಯಪತ್ರದಲ್ಲಿ ಉಲ್ಲೇಖವಾಗಿರುವ ದಿನಾಂಕಃ 23.07.1994 ರ ಹಿಸ್ಸಾ ಪತ್ರವನ್ನು ನಾನು ನೋಡಿರುವುದಿಲ್ಲ. ಸದರಿ ನಿಡಿ–5 ಕ್ರಯಪತ್ರದಲ್ಲಿ ಸ್ವತ್ತು ಹಿಸ್ಸಾ ಮೂಲಕ ಬಂದಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ದಾವಾ ಸ್ವತ್ತನ್ನು ಖರೀದಿಸುವ ಮೊದಲು ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪತ್ರ ಬರಹಗಾರರಿಗೆ ನೀಡಿರುತ್ತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯೂ ಪಹಣಿ ಮತ್ತು ಮ್ಯೂಟೇಷನ್ ಅನ್ನು ಮಾತ್ರ ನೀಡಿರುತ್ತೇನೆಂದು ನುಡಿಯುತ್ತಾರೆ. ದಾವಾ ಸ್ವತ್ತು ದಿನಾಂಕಃ 23.07.1994 ರ ಹಿಸ್ಸೆಯ ಮೂಲಕ ಬಂತು ಎಂದು ಪತ್ರ ಬರಹಗಾರರಿಗೆ ಯಾರು ತಿಳಿಸಿದರು ಎಂದು ನನಗೆ ಗೊತ್ತಿಲ್ಲ. ಪತ್ರ ಬರಹಗಾರರು ಹಿಸ್ಸಾ ಪತ್ರವನ್ನು ನೋಡಿ ಕ್ರಯಪತ್ರದಲ್ಲಿ ಬರೆದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ದಾಖಲೆಯು ದಿನಾಂಕಃ 23.07.1994 ರ ಹಿಸ್ಸಾ ಪತ್ರ ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ